<u>**ಕರ್ನಾಟಕ ಸರ್ಕಾರದ ನಡವಳಿಗಳು**</u>

**ವಿಷಯ:** 2016-17ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯ **C&Q - Gen (MVS) ಘಟಕದಡಿ ಬಹುಗ್ರಾಮ ಕುಡಿಯುವ ನೀರು ಯೋಜನೆಗಳಿಗೆ** ಅನುದಾನವನ್ನು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂ.ಗ್ರಾಅಪ/203/ಗ್ರಾಕುನೀ&ನೈಇ/2015, ಬೆಂಗಳೂರು, ದಿನಾಂಕ 25-05-2016
2. ಸರ್ಕಾರದ ಆರ್ಥಿಕ ಇಲಾಖೆಯ ಸಹಮತಿ ಸಂ.ಆಇ/168/ವೆಚ್ಚ-6/2016, ಬೆಂಗಳೂರು, ದಿನಾಂಕ: 20-10-2016

<u>**ಪೀಠಿಕೆ:**</u>

ಮೇಲೆ ಓದಲಾದ ಉಲ್ಲೇಖ (1) ರ ಸರ್ಕಾರದ ಆದೇಶದನ್ವಯ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯಡಿ ಬಳಕೆಯಾಗದೆ ಬ್ಯಾಂಕಿನ ಖಾತೆಯಲ್ಲಿದ್ದ ರೂ.61204.12 ಲಕ್ಷಗಳ ಅನುದಾನವನ್ನು ಸಚಿವ ಸಂಪುಟದ ನಿರ್ಣಯದಂತೆ ಆರ್ಥಿಕ ಇಲಾಖೆಗೆ ಜಮೆ ಮಾಡಲಾಗಿರುತ್ತದೆ. ಈ ಹಿಂದೆ ಈಗಾಗಲೇ ರೂ.30600.00 ಲಕ್ಷಗಳ ಅನುದಾನವನ್ನು ಗ್ರಾಮೀಣ ಕುಡಿಯುವ ನೀರು ಯೋಜನೆಗಳಿಗೆ ಬಿಡುಗಡೆ ಮಾಡಲಾಗಿದ್ದು, ಪ್ರಸ್ತುತ ಉಳಿದ ರೂ.30600.00 ಲಕ್ಷಗಳ ಅನುದಾನವನ್ನು ಲೆಕ್ಕ ಶೀರ್ಷಿಕೆ 2215-01-102-9-08-132 (ಯೋಜನೆ) ಅಡಿ ರಾಜ್ಯದ ಪಾಲಾಗಿ ಬಿಡುಗಡೆ ಮಾಡಲು ಉಲ್ಲೇಖ (2) ರಲ್ಲಿ ಆರ್ಥಿಕ ಇಲಾಖೆಯು ಸಹಮತಿಸಿರುತ್ತದೆ. ಸದರಿ ರೂ.30600.00 ಲಕ್ಷಗಳ ಅನುದಾನದಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯ C&Q - Gen (MVS) ಘಟಕದಡಿ ಒಟ್ಟು ರೂ.1851.50 ಲಕ್ಷಗಳು (ಒಂದು ಸಾವಿರ ಎಂಟುನೂರ ಐವತ್ತೊಂದು ಲಕ್ಷ ಹಾಗೂ ಐವತ್ತು ಸಾವಿರಗಳು ಮಾತ್ರ) ಅನುದಾನವನ್ನು ಲೆಕ್ಕ ಶೀರ್ಷಿಕೆ 2215-01-102-9-08-132 ಸಾಮಾನ್ಯ ಅಡಿ ರಾಜ್ಯದ ಪಾಲಾಗಿ ರಾಯಚೂರು, ಮಂಡ್ಯ, ಕಲ್ಬುರ್ಗಿ, ಬಿಜಾಪುರ, ದಾರವಾಡ, ಹಾಸನ ಮತ್ತು ಕೊಪ್ಪಳ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳಿಗೆ ಕಾಮಗಾರಿವಾರು ಬಿಡುಗಡೆ ಮಾಡಲು ತೀರ್ಮಾನಿಸಲಾಗಿರುತ್ತದೆ. ಆದ್ದರಿಂದ, ಈ ಕೆಳಕಂಡ ಆದೇಶ.

<u>**ಸರ್ಕಾರದ ಆದೇಶ ಸಂ.ಗ್ರಾಅಪ/203/ಗ್ರಾಕುನೀ&ನೈಇ/2015, ಬೆಂಗಳೂರು, ದಿನಾಂಕ 20-03-2017**</u>

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ 2016-17ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯ C&Q - Gen (MVS) ಘಟಕದಡಿ 2016-17ನೇ ಸಾಲಿನ ಅನುದಾನ **ಒಟ್ಟು ರೂ.1851.50 ಲಕ್ಷ (ಒಂದು ಸಾವಿರ ಎಂಟು ನೂರ ಐವತ್ತೊಂದು ಲಕ್ಷ ಹಾಗೂ ಐವತ್ತು ಸಾವಿರಗಳು ಮಾತ್ರ)** ಅನುದಾನವನ್ನು ಲೆಕ್ಕ ಶೀರ್ಷಿಕೆ 2215-01-102-9-08-132 ಸಾಮಾನ್ಯ ಅಡಿ ರಾಯಚೂರು, ಮಂಡ್ಯ, ಕಲ್ಬುರ್ಗಿ, ಬಿಜಾಪುರ, ದಾರವಾಡ, ಹಾಸನ ಮತ್ತು ಕೊಪ್ಪಳ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳಿಗೆ ಆದೇಶದ ಅನುಬಂಧದಲ್ಲಿ ಸೂಚಿಸಲಾಗಿರುವಂತೆ **ಕಾಮಗಾರಿವಾರು** ಖಜಾನೆ ಮೂಲಕ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು C&Q - Gen (MVS) ಘಟಕದಡಿ ಲೆಕ್ಕ ಶೀರ್ಷಿಕೆ 2215-01-102-9-08-132 ಸಾಮಾನ್ಯ ಅಡಿ ಬಿಲ್ಲುಗಳನ್ನು ಖಜಾನೆಯಿಂದ ಸೆಳೆಯುವಾಗ ರಾಜ್ಯ ವಲಯದಡಿ ಬಿಳಿ ಬಣ್ಣದ ಸವಿವರ ಸಾದಿಲ್ವಾರು ಬಿಲ್ಲುಗಳ ಮುಖಾಂತರ ಸೆಳೆಯತಕ್ಕದ್ದು.

3. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು ಖಜಾನೆಯಿಂದ ಹಣ ಸೆಳೆಯುವಾಗ ಕರ್ನಾಟಕ ಪಾರದರ್ಶಕ ಕಾಯ್ದೆ-1999 ಮತ್ತು ಕರ್ನಾಟಕ ಪಾರದರ್ಶಕ ನಿಯಮಗಳು-2000, ಕರ್ನಾಟಕ ಆರ್ಥಿಕ ಸಂಹಿತೆ-1958, ಕರ್ನಾಟಕ ಖಜಾನೆ ಸಂಹಿತೆ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, ಪಿಡಬ್ಲ್ಯುಡಿ "ಎ" ಕೋಡ್ ಮತ್ತು "ಡಿ" ಕೋಡ್ ಹಾಗೂ ಚಾಲ್ತಿ ಇರುವ ಇಲಾಖಾ ಇತರೆ ಸುತ್ತೋಲೆ, ಆದೇಶ ಹಾಗೂ ನಿಯಮಗಳು / ಕಾಯ್ದೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

4. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು ಖಜಾನೆಯಿಂದ ಹಣ ಸೆಳೆಯುವಾಗ ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಬಿಲ್ಲುಗಳಿಗೆ ಮೇಲುರುಜು ಮಾಡತಕ್ಕದ್ದು.

5. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನಕ್ಕೆದುರಾಗಿ ಮಾಡಿದ ವೆಚ್ಚದ ವಿವರ ಹಾಗೂ ಲೆಕ್ಕಪತ್ರಗಳನ್ನು ಸಂಬಂಧಿಸಿದ ಗ್ರಾಮೀಣ ಕುಡಿಯುವ ನೀರು ವಿಭಾಗದವರು ಜಿಲ್ಲಾ ಪಂಚಾಯತ್ ಮುಖಾಂತರ ಪ್ರತೀ ತಿಂಗಳು 10ನೇ ತಾರೀಖಿನೊಳಗಾಗಿ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.

6. ಪ್ರತೀ ಮಾಹೆಯ ಅಂತ್ಯದ ದಿನಾಂಕದವರೆಗೆ ಖಜಾನೆಯಲ್ಲಿ ಆಗುವ ವೆಚ್ಚವನ್ನು ಭೌತಿಕ ಪ್ರಗತಿಯೊಂದಿಗೆ C&Q - Gen (MVS) ಘಟಕದಡಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದವರು ಕೇಂದ್ರ ಸರ್ಕಾರದ IMIS ತಂತ್ರಾಂಶದಲ್ಲಿ ಇಂದೀಕರಿಸತಕ್ಕದ್ದು.

7. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನದಡಿಯ ವೆಚ್ಚದ ಬಿಲ್ಲುಗಳನ್ನು ಇಲಾಖೆಯ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಡ್ಡಾಯವಾಗಿ ದಾಖಲಿಸತಕ್ಕದ್ದು ಮತ್ತು ಸದರಿ ತಂತ್ರಾಂಶದಲ್ಲಿ ಸೃಜಿಸಿದ ಕಾರ್ಯಪಾಲಕ ಅಭಿಯಂತರರು ಮತ್ತು ಲೆಕ್ಕ ಅಧೀಕ್ಷಕರ ಸಹಿಯೊಳಗೊಂಡ ಪಾವತಿ ನಮೂನೆಯನ್ನು ಬಿಲ್ಲಿನೊಂದಿಗೆ ಖಜಾನೆಯಲ್ಲಿ ಸಲ್ಲಿಸತಕ್ಕದ್ದು ಹಾಗೂ ಜಿಲ್ಲಾ / ಉಪ ಖಜಾನಾಧಿಕಾರಿಗಳು ಸದರಿ ಗಾಂಧಿ ಸಾಕ್ಷಿ ಕಾಯಕ ಪಾವತಿ ನಮೂನೆ ಹೊಂದಿರುವ ಬಿಲ್ಲುಗಳನ್ನು ಮಾತ್ರ ಮಾನ್ಯ ಮಾಡತಕ್ಕದ್ದು.

8. ಮುಖ್ಯ ಲೆಕ್ಕಾಧಿಕಾರಿಗಳು, ಗ್ರಾ.ಕು.ನೀ.&.ನೈ. ಇಲಾಖೆ ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಅನುದಾನವನ್ನು IMIS ನಲ್ಲಿ ಇಂದೀಕರಿಸತಕ್ಕದ್ದು.

9. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವುದೇ ಕಾರಣದಲ್ಲೂ ಇತರೆ ಘಟಕದಡಿ ವರ್ಗಾಯಿಸಿ ಉಪಯೋಗಿಸಿಕೊಳ್ಳದಂತೆ ಕ್ರಮ ವಹಿಸತಕ್ಕದ್ದು. ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲುಸ್ತುವಾರಿ ಮಾಡಿ ಕಾಲಕಾಲಕ್ಕೆ ವರದಿ ಮಾಡತಕ್ಕದ್ದು.

10. ಮೇಲ್ಕಂಡ ಅನುದಾನವನ್ನು ಈಗಾಗಲೇ ಅನುಮೋದನೆಯಾಗಿ ಕ್ರಿಯಾ ಯೋಜನೆಯಡಿ ಸೇರ್ಪಡಿಸಲ್ಪಟ್ಟಿರುವ ಮುಂದುವರಿದಿರುವ / ಪೂರ್ಣಗೊಂಡಿರುವ / ಪೂರ್ಣಗೊಳಿಸಬೇಕಾಗಿರುವ ಕುಡಿಯುವ ನೀರಿನ ಯೋಜನೆಗಳ ಸಲುವಾಗಿ ಮಾತ್ರ ವಿನಿಯೋಗಿಸತಕ್ಕದ್ದು.

11. ಈ ಆದೇಶವನ್ನು ಸರ್ಕಾರದ ಆರ್ಥಿಕ ಇಲಾಖೆಯ ಸಹಮತಿ ಸಂ.ಆಇ/168/ವೆಚ್ಚ-6/2016, ಬೆಂಗಳೂರು, ದಿನಾಂಕ: 20-10-2016 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ. ಕೃಷ್ಣಪ್ಪ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾ.ನೀ.ಸ.) (ಪ್ರ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.

<u>ಪ್ರತಿಯನ್ನು :</u>

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ, 1ನೇ ಮಹಡಿ, ಕೆ.ಹೆಚ್.ಬಿ. ಕಟ್ಟಡ, ಕಾವೇರಿಭವನ, ಬೆಂಗಳೂರು.
6. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು
7. ಅಧ್ಯಕ್ಷರು, ಜಿಲ್ಲಾ ಪಂಚಾಯತ್, ರಾಯಚೂರು, ಮಂಡ್ಯ, ಕಲ್ಬುರ್ಗಿ, ಬಿಜಾಪುರ, ದಾರವಾಡ, ಹಾಸನ ಮತ್ತು ಕೊಪ್ಪಳ ಜಿಲ್ಲೆ.
8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಯಚೂರು, ಮಂಡ್ಯ, ಕಲ್ಬುರ್ಗಿ, ಬಿಜಾಪುರ, ದಾರವಾಡ, ಹಾಸನ ಮತ್ತು ಕೊಪ್ಪಳ ಜಿಲ್ಲೆ

9. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ಸಂಬಂಧಿಸಿದ ವೃತ್ತ ಕಚೇರಿಗಳು.
10. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
12. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
13. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
14. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
15. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
16. ಮುಖ್ಯ ಲೆಕ್ಕಾಧಿಕಾರಿಗಳು, RDW&SD ಕೇಂದ್ರ ಕಛೇರಿ, ಬೆಂಗಳೂರು.
17. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಯಚೂರು, ಮಂಡ್ಯ, ಕಲ್ಬುರ್ಗಿ, ಬಿಜಾಪುರ, ದಾರವಾಡ, ಹಾಸನ ಮತ್ತು ಕೊಪ್ಪಳ.
18. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ., ರಾಯಚೂರು, ಮಂಡ್ಯ, ಕಲ್ಬುರ್ಗಿ, ಬಿಜಾಪುರ, ದಾರವಾಡ, ಹಾಸನ ಮತ್ತು ಕೊಪ್ಪಳ ಜಿಲ್ಲೆ.
19. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
20. ಜಿಲ್ಲಾ ಖಜಾನಾಧಿಕಾರಿಗಳು, ಖಜಾನೆ ಇಲಾಖೆ, ರಾಯಚೂರು, ಮಂಡ್ಯ, ಕಲ್ಬುರ್ಗಿ, ಬಿಜಾಪುರ, ದಾರವಾಡ, ಹಾಸನ ಮತ್ತು ಕೊಪ್ಪಳ.
21. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್), ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
22. ಆಯುಕ್ತರು, RDW&SD ಮತ್ತು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ ಇವರ ಆಪ್ತ ಸಹಾಯಕರಿಗೆ.
23. ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ ಇವರ ಆಪ್ತ ಸಹಾಯಕರು.
24. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.
25. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾ.ಅ.&.ಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
26. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
27. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
28. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

## ಅನುಬಂಧ

**ಸರ್ಕಾರದ ತಿದ್ದುಪಡಿ ಆದೇಶ ಸಂ.ಗ್ರಾಅಪ/203/ಗ್ರಾಕುನೀ&ನೈಇ/2015, ಬೆಂಗಳೂರು, ದಿನಾಂಕ 20-03-2017 ರ ಲಗತ್ತು**

**2016-17ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯ C&Q - Gen (MVS) ಘಟಕದಡಿ ಬಹುಗ್ರಾಮ ಕುಡಿಯುವ ನೀರು ಯೋಜನೆಗಳಿಗೆ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾದ ಅನುದಾನ**

*(ರೂ. ಲಕ್ಷಗಳಲ್ಲಿ)*

| ಕ್ರ. ಸಂ. | ಜಿಲ್ಲೆ/ವಿಭಾಗ | ತಾಲ್ಲೂಕು | ಯೋಜನೆ ಹೆಸರು | ಘಟಕ | ಬಿಡುಗಡೆ ಮಾಡಲಾದ ಅನುದಾನ |
|---|---|---|---|---|---|
| 1 | ರಾಯಚೂರು | ಮಾನ್ವಿ | ಹರವಿ ಹಾಗೂ ಇತರೆ 5 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | C&Q | 21.00 |
| 2 | ರಾಯಚೂರು | ರಾಯಚೂರು | ಮೀರಾಪುರ ಹಾಗೂ ಇತರೆ 5 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | C&Q | 118.43 |
| 3 | ರಾಯಚೂರು | ಮಾನ್ವಿ | ಅಮಿನಗಡ್ ಹಾಗೂ ಇತರೆ 8 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | C&Q | 25.00 |
| 4 | ರಾಯಚೂರು | ದೇವದುರ್ಗ | ಪಲಕನಮರಡಿ ಹಾಗೂ ಇತರೆ 10 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | C&Q | 100.00 |
| 5 | ಮಂಡ್ಯ | ಪಾಂಡವಪುರ | DBOT-ಅರಳಕುಪ್ಪೆ ಹಾಗೂ ಇತರೆ 62 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | C&Q | 200.00 |
| 6 | ಕಲ್ಬುರ್ಗಿ | ಚಿಂಚೋಳಿ | ಗಾದಿಲಿಂಗದಹಳ್ಳಿ ಹಾಗೂ ಇತರೆ 7 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | C&Q | 100.00 |
| 7 | ಕಲ್ಬುರ್ಗಿ | ಚಿಂಚೋಲಿ | ಪಸ್ತಾಪುರ ಹಾಗೂ ಇತರೆ 8 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | C&Q | 40.00 |
| 8 | ಕಲ್ಬುರ್ಗಿ | ಅಫ್ಜಲ್‌ಪುರ | ಅತನೂರ್ ಹಾಗೂ ಇತರೆ 2 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | C&Q | 49.46 |
| 9 | ಕಲ್ಬುರ್ಗಿ | ಚಿತ್ತಾಪುರ | ರಾವೂರ್ ಮತ್ತು ಮಾಲಗಟ್ಟಿ ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | C&Q | 100.00 |
| 10 | ಕಲ್ಬುರ್ಗಿ | ಅಫ್ಜಲ್‌ಪುರ | ಕಲ್ಲೂರು ಹಾಗೂ ಇತರೆ 6 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | C&Q | 60.00 |
| 11 | ಕಲ್ಬುರ್ಗಿ | ಚಿಂಚೋಳಿ | ಗದಿಕೇಶ್ವರ ಹಾಗೂ ಇತರೆ 4 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | C&Q | 200.00 |
| 12 | ಬಿಜಾಪುರ | ಬಿಜಾಪುರ | ನಾಗಠಾಣ ಹಾಗೂ ಇತರೆ 53 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | | 455.00 |
| 13 | ಧಾರವಾಡ | ಹುಬ್ಬಳ್ಳಿ | ಕೋಳಿವಾಡ ಹಾಗೂ ಇತರೆ 2 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | C&Q | 43.61 |
| 14 | ಹಾಸನ | ಹೊಳೆನರಸೀಪುರ | ಹಳ್ಳಿ ಮೈಸೂರು ಹಾಗೂ ಇತರೆ 16 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | C&Q | 150.00 |
| 15 | ಹಾಸನ | ಹೊಳೆನರಸೀಪುರ | ಯಲ್ಲಾಪುರ ಹಾಗೂ ಇತರೆ 11 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | C&Q | 75.00 |
| 16 | ಕೊಪ್ಪಳ | ಗಂಗಾವತಿ | ಸಿದ್ಧಾಪುರ ಹಾಗೂ ಇತರೆ 8 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | C&Q | 14.00 |
| 17 | ಕೊಪ್ಪಳ | ಕೊಪ್ಪಳ | ಮುಡ್ಲಾಪುರ್ ಹಾಗೂ ಇತರೆ 22 ಗ್ರಾಮಗಳಿಗೆ [ಮುಂಡರಗಿ & 87 ಗ್ರಾಮಗಳಿಗೆ (ಹಂತ-2)], ಹಿರೇಸುಲಿಕೆರೆ ಹಾಗೂ 13 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ. | C&Q | 100.00 |
| | | | ಒಟ್ಟು | | **1851.50** |

(ಬಿ. ಕೃಷ್ಣಪ್ಪ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀ.ಸ.) (ಪ್ರ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.